**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 12-12-2023.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಆರ ಆರ ಕೆ ವಕೀಲರಿಂದಃ</u>**

14. ಕಬ್ಬು ಬೆಳೆ ಕಾರ್ಖಾನೆಗೆ ಯಾರು ಕಳುಹಿಸುತ್ತಾರೆ ಅವರ ಬಳಿ ಕಬ್ಬು ತೂಕದ ರಶೀದಿ ಇರುತ್ತದೆ ಎಂದರೆ ನಿಜ. ಕಬ್ಬು ತೂಕ ರಶೀದಿ ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಕಬ್ಬು ತೂಕದ 12 ರಶೀದಿಗಳನ್ನು ಸಾಕ್ಷಿಗೆ ತೋರಿಸಿ ಸದರಿ ರಶೀದಿಗಳು ನಿಮ್ಮ ಹೆಸರಿನಲ್ಲಿ ಕಸಮಳಗಿ ಗ್ರಾಮದ ಬೆಳೆ ಲೈಲಾ ಶುಗರ್ಸ ಕಾರ್ಖಾನೆಗೆ ಕಳುಹಿಸಿದ ರಶೀದಿಗಳು ಎಂದರೆ ಸಾಕ್ಷಿಯು ನಾನು ಕಳುಹಿಸಿದ್ದೆನೆ ನನ್ನ ಹೆಸರಿನಲ್ಲಿ ಇರುವ ರಶೀದಿಗಳು ಎಂದು ಅದನ್ನು ಒಪ್ಪಿ ಕೊಳ್ಳುತ್ತಾರೆ. ಸದರಿ <u>ರಶೀದಿಗಳನ್ನು ನಿಪಿ.64(1) ರಿಂದ 64(12) ಎಂದು</u> ಗುರುತಿಸಲಾಯಿತು. ಕಬ್ಬು ತೂಕದ 26 ರಶೀದಿಗಳನ್ನು ಸಾಕ್ಷಿಗೆ ತೋರಿಸಿ, ಸದರಿ ರಶೀದಿಗಳು ಕಸಮಳಗಿ ಗ್ರಾಮದ ಬೆಳೆ ಜಿ ಎಮ್ ಆರ್. ಕಾರ್ಖಾನೆಗೆ ಕಳುಹಿಸಿದ ರಶೀದಿಗಳು ಎಂದರೆ ಸಾಕ್ಷಿಯು ನಾನು ಕಳುಹಿಸಿದ್ದೆನೆ ನನ್ನ ಹೆಸರಿನಲ್ಲಿ ಇರುವ ರಶೀದಿಗಳು ಎಂದು ಅದನ್ನು ಒಪ್ಪಿಕೊಳ್ಳುತ್ತಾರೆ. ಸದರಿ <u>ರಶೀದಿಗಳನ್ನು ನಿಪಿ.65(1) ರಿಂದ 65(26) ಎಂದು</u> ಗುರುತಿಸಲಾಯಿತು. ಕಬ್ಬು ತೂಕದ ಎರಡು ರಶೀದಿಗಳನ್ನು ಸಾಕ್ಷಿಗೆ ತೋರಿಸಿ, ಸದರಿ ರಶೀದಿಗಳು ಕಸಮಳಗಿ ಗ್ರಾಮದ ಬೆಳೆ ಪ್ಯಾರಿಸ ಶುಗರ್ಸ ಕಾರ್ಖಾನೆಗೆ ಕಳುಹಿಸಿದ ರಶೀದಿಗಳು ಎಂದರೆ ಸಾಕ್ಷಿಯು ನಾನು ಕಳುಹಿಸಿದ್ದೆನೆ ನನ್ನ ಹೆಸರಿನಲ್ಲಿ ಇರುವ ರಶೀದಿಗಳು ಎಂದು ಅದನ್ನು ಒಪ್ಪಿಕೊಳ್ಳುತ್ತಾರೆ. ಸದರಿ <u>ರಶೀದಿಗಳನ್ನು ನಿಪಿ.66(1) ಮತ್ತು 66(2) ಎಂದು</u>

ಗುರುತಿಸಲಾಯಿತು. ಕಬ್ಬು ತೂಕದ 4 ರಶೀದಿಗಳನ್ನು ಸಾಕ್ಷಿಗೆ ತೋರಿಸಿ, ಸದರಿ ರಶೀದಿಗಳು ಕೆರವಾಡ ಗ್ರಾಮದ 2018-19ರ ಬೆಳೆ ಲೈಲಾ ಶುಗರ್ಸ ಕಾರ್ಖಾನೆಗೆ ವಾದಿ ನಂ.1 -ರಮೇಶರವರ ಹೆಸರಿನಲ್ಲಿ ಕಳುಹಿಸಿದ ರಶೀದಿಗಳು ಎಂದರೆ ಸಾಕ್ಷಿಯು ಅದನ್ನು ಒಪ್ಪಿಕೊಳ್ಳುತ್ತಾರೆ. ಸದರಿ ರಶೀದಿಗಳನ್ನು ನಿಪಿ.67(1) ರಿಂದ 67(4) ಎಂದು ಗುರುತಿಸಲಾಯಿತು. ಕಬ್ಬು ತೂಕದ 13 ರಶೀದಿಗಳನ್ನು ಸಾಕ್ಷಿಗೆ ತೋರಿಸಿ, ಸದರಿ ರಶೀದಿಗಳು ಕೆರವಾಡ ಗ್ರಾಮದ 2014-15ರ ಬೆಳೆ ಲೈಲಾ ಶುಗರ್ಸ ಕಾರ್ಖಾನೆಗೆ ವಾದಿ ನಂ.1 -ರಮೇಶರವರ ಹೆಸರಿನಲ್ಲಿ ಕಳುಹಿಸಿದ ರಶೀದಿಗಳು ಎಂದರೆ ಸಾಕ್ಷಿಯು ಅದು ವಾದಿಗೆ ಗೊತ್ತು ಎಂದು ಹೇಳುತ್ತಾರೆ. ನನಗೆ ಸದರಿ ರಶೀದಿಗಳನ್ನು ನೋಡಿ ಗುರುತಿಸಲು ಸಾಕ್ಷಿಗೆ ಸೂಚಿಸಲಾಗಿ ಸಾಕ್ಷಿಯು ಅದನ್ನು ನೋಡಿ ವಾದಿಗೆ ಗೊತ್ತು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ 13 ರಶೀದಿಗಳು ವಾದಿ ನಂ.1 ರವರ ಹೆಸರಿನಲ್ಲಿ ಇರುವ ವಿಚಾರ ನಿಮಗೆ ಗೊತ್ತಿದ್ದು ನೀವು ವಾದಿಗೆ ಗೊತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸಾಕ್ಷಿಯು ರಶೀದಿಗಳು ವಾದಿ ನಂ.1 ರವರ ಹೆಸರಿನಲ್ಲಿ ಇವೆ ಅವರಿಗೆ ಸದರಿ ರಶೀದಿಗಳ ವಿಚಾರ ಗೊತ್ತು ಎಂದು ಹೇಳುತ್ತಾರೆ. ಸಾಕ್ಷಿಗೆ ಮೂರು ರಶೀದಿಗಳನ್ನು ತೋರಿಸಲಾಗಿ ಅದು ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ರಾಜು-ಪ್ರತಿವಾದಿ ನಂ.5 ರವರ ಹೆಸರಿನಲ್ಲಿ ಇದೆ ಎಂದು ಹೇಳುತ್ತಾರೆ. ಕಬ್ಬು ತೂಕದ 5 ರಶೀದಿಗಳನ್ನು ಸಾಕ್ಷಿಗೆ ತೋರಿಸಿ, ಸದರಿ ರಶೀದಿಗಳು ಪ್ರತಿವಾದಿ ನಂ.5ರವರ ಹೆಸರಿನಲ್ಲಿ ಕಳುಹಿಸಿದ ರಶೀದಿಗಳು ಎಂದರೆ ಸಾಕ್ಷಿಯು ಅದು ಅವರ ಹೆಸರಿನಲ್ಲಿ

ಹೋಗಿದೆ ಸದರಿ ರಶೀದಿಗಳ ವಿಚಾರ ಪ್ರತಿವಾದಿ ನಂ.5 ರವರಿಗೆ ಗೊತ್ತು ಎಂದು ಹೇಳುತ್ತಾರೆ.

15. ಈ ದಾವೆ ಸಲ್ಲಿಸಿದ ನಂತರ ನನ್ನ ಹೆಸರಿನಲ್ಲಿ ಯಾವ ಬೆಳೆಯು ಕಾರ್ಖಾನೆಗೆ ಹೋಗಿಲ್ಲ. ವಾದಿ ನಂ.1 ಮತ್ತು ಪ್ರತಿವಾದಿ ನಂ.5 ರವರ ಹೆಸರಿನಲ್ಲಿ ಈ ದಾವೆ ಸಲ್ಲಿಸಿದ ನಂತರದ ಬೆಳೆಗಳು ಕಾರ್ಖಾನೆಗೆ ಹೋಗಿರುವ ವಿಚಾರ ನನಗೆ ಗೊತ್ತಿದ್ದು, ನಾನು ಅದು ವಿಚಾರ ಅವರಿಗೆ ಗೊತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಇವತ್ತಿನವರೆಗೆ ವಾದಿ ನಂ.1 ಮತ್ತು ಪ್ರತಿವಾದಿ ನಂ.5 ರವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

16. ನಾನು ಹುಬ್ಬಳ್ಳಿಯಲ್ಲಿಯ ಮನೆಯನ್ನು 2001 ರಲ್ಲಿ ಕಟ್ಟಿಸಿದ್ದೇನೆ. 2001 ರಲ್ಲಿ ನಾನು ಹುಬ್ಬಳ್ಳಿಯಲ್ಲಿ ನೆಲಮಹಡಿ ಕಟ್ಟಿಸಿದ್ದು ಅದಕ್ಕೆ ಸುಮಾರು 10-15 ಲಕ್ಷ ಖರ್ಚು ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಕೇವಲ 2,50,000/- ರೂಪಾಯಿ ಖರ್ಚು ಆಗಿತ್ತು ಎಂದು ಹೇಳುತ್ತಾರೆ. ಸದರಿ ಮನೆಗೆ ಎರಡು ಬೆಡ್ ರೂಮ, ಅಡುಗೆ ಮನೆ, ಹಾಲ್ ಇರುತ್ತದೆ, ಸದರಿ ಮನೆಗೆ ಸಿಟ ಔಟ ಹಾಗೂ ಕಾರ ಪಾರ್ಕಿಂಗ್ ಇರುವುದಿಲ್ಲ. ಸದರಿ ಮನೆ ಆರ್. ಸಿ. ಸಿ ಕಟ್ಟಡ ಇರುತ್ತದೆ ನಾನು 2001 ರಲ್ಲಿ ಹುಬ್ಬಳ್ಳಿಯಲ್ಲಿ ಕಟ್ಟಿಸಿದ ಮನೆಗೆ ಕೇವಲ ರೂ.2,50,000/- ಖರ್ಚು ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು 2001

ರಲ್ಲಿ ಕಟ್ಟಿಸಿದ ಮನೆಗೆ ನನ್ನ ಹೆಸರಿನಲ್ಲಿ ಕಬ್ಬು ಬೆಳೆ ಕಾರ್ಖಾನೆಗೆ ಕಳುಹಿಸಿ ಬರುತ್ತಿದ್ದ ಬೆಲೆಯ ಹಣವನ್ನು ಉಪಯೋಗಿಸಿ ಮನೆಯನ್ನು ಕಟ್ಟಿಸಿದ್ದೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಝುಂಜವಾಡ ದಿಂದ ಹುಬ್ಬಳ್ಳಿಗೆ ವಾರಕ್ಕೆ ಒಮ್ಮೆ ಬರುತ್ತಿದ್ದರು. ನನ್ನ ಹೆಂಡತಿ ದೀರ್ಘಾವಧಿಯ ರಜೆಯನ್ನು ಪಡೆದು ಗೈರು ಹಾಜರಾತಿಗೆ ಪಗಾರ ಪಡೆಯದೆ ಎಷ್ಟು ವರ್ಷಗಳ ಕಾಲ ಗೈರು ಹಾಜರು ಇದ್ದರು ಎಂದು ಹೇಳಲು ಬರುವುದಿಲ್ಲ, ಆದರೆ ಅವರು ದೀರ್ಘಕಾಲದ ರಜೆ ಪಡೆದಿದ್ದರು. ನನ್ನ ಹೆಂಡತಿಗೆ ಆರೋಗ್ಯದ ಸಮಸ್ಯಗಳು ಇದ್ದವು ಎಂದರೆ ಸರಿಯಲ್ಲ. ನಿಮ್ಮ ಹೆಂಡತಿಯ ಪಗಾರ 2009ರ ವರೆಗೆ ಸುಮಾರು 4000 ರಿಂದ 7500 ರವರೆಗೆ ಪಗಾರ ಇತ್ತು ಎಂದರೆ ಸಾಕ್ಷಿಯು ಅದು ನೆನಪಿಲ್ಲ ಆದರೆ ದಾಖಲೆ ಹಾಜರು ಮಾಡಿದ್ದೇನೆ ಎಂದು ಹೇಳುತ್ತಾರೆ. ನನ್ನ ಹೆಂಡತಿ ಆದಾಯ ತೆರಿಗೆ ಪಾವತಿ ಮಾಡುತ್ತಿರಲಿಲ್ಲ. ನಾನು ನನ್ನ ಹೆಂಡತಿಯಿಂದ ಯಾವ ವರ್ಷ ಎಷ್ಟು ಹಣ ಸಾಲ ಪಡೆದಿದ್ದೆ ಎಂದು ಹೇಳಲು ಬರುವುದಿಲ್ಲ. ನೀವು ಸಾಲ ಪಡೆದ ಬಗ್ಗೆ ದಾಖಲಾತಿ ಇಲ್ಲ ಎಂದರೆ ಸಾಕ್ಷಿಯು ನಾನು ಚಕ್ ಮೂಲಕ ಕೆಲವೊಮ್ಮೆ ಸಾಲ ಪಡೆಯುತ್ತಿದ್ದೆ ಎಂದು ಹೇಳುತ್ತಾರೆ. ನಿಮ್ಮ ಹೆಂಡತಿ ತನ್ನ ಪಗಾರದ ಹಣವನ್ನು ನನಗೆ ಕೊಟ್ಟು ಆಸ್ತಿ ಖರೀದಿಸಿದ ವಿಚಾರ ಸರ್ಕಾರಕ್ಕೆ ತಿಳಿಸಿದ್ದಾರೆಯೇ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರಲಿಲ್ಲ ಎಂದು ಹೇಳುತ್ತಾರೆ. ನನ್ನ ಹೆಂಡತಿಯ ಪಗಾರ ನಮ್ಮ ಕುಟುಂಬದ ವ್ಯವಸ್ಥೆಗೆ ಸಾಕಾಗುತ್ತಿರಲಿಲ್ಲ ನಾನು ಅವರಿಂದ ಯಾವುದೇ ಹಣದ ಸಹಾಯ ಪಡೆದಿರಲಿಲ್ಲ ನಮ್ಮ ಒಟ್ಟು ಕುಟುಂಬದ ಆಸ್ತಿಗಳ ಆದಾಯದಿಂದ ನನ್ನ ಹೆಸರಿನಲ್ಲಿ ಮತ್ತು ನನ್ನ ಹೆಂಡತಿಯ ಹೆಸರಿನಲ್ಲಿ ಹಣ

ಠೇವಣಿ ಇಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಠೇವಣಿ ಹಣ ನನ್ನ ಆದಾಯದಿಂದ ಠೇವಣಿ ಇಡಲಾಗಿದೆ ಎಂದು ತೋರಿಸಲು ನಾನು ಬ್ಯಾಂಕ ಪಾಸಬುಕ್ಕ ಹಾಜರು ಮಾಡಿದ್ದೇನೆ. ನಾನು ಸದರಿ ಠೇವಣಿ ಹಣ ನನ್ನ ಆದಾಯದಿಂದ ಇಡಲಾಗಿದೆ ಎಂದು ತೋರಿಸಲು ಪಾಸಬುಕ್ಕದಲ್ಲಿ ನಮೂದು ಇಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

17. ನಾನು ಖಾಸಗಿಯಾಗಿ ಯಾರಿಂದ ಎಷ್ಟು ಹಣ ಪಡೆದಿದ್ದೇನೆ ಎಂದು ಈಗ ಹೇಳಲು ಅದರ ಬಗ್ಗೆ ನೆನಪಿಲ್ಲ. ನಾನು ಖಾಸಗಿ ವ್ಯಕ್ತಿಗಳಿಂದ ಸಾಲ ಪಡೆದ ಕುರಿತು ದಾಖಲೆ ಹಾಜರು ಮಾಡಿಲ್ಲ. ನಿವು ಹಾಜರು ಮಾಡಿರುವ ಬ್ಯಾಂಕ ಪಾಸ ಬುಕ್ ಗಳಲ್ಲಿ ಯಾವ ತರಹದ ಸಾಲ ಎಂದು ನಮೂದು ಇಲ್ಲ ಎಂದರೆ ಸಾಕ್ಷಿಯು ಸಾಲ ನಮೂದು ಇದೆ ಎಂದು ಹೇಳುತ್ತಾರೆ. ನನ್ನ ಹೆಸರಿನಲ್ಲಿ ಖರೀದಿಸಿದ ಆಸ್ತಿಗಳನ್ನು ಹಾಗೂ ಅದರಲ್ಲಿ ಮನೆಯನ್ನು ಕಟ್ಟಲು ನನ್ನ ಬಳಿ ನನ್ನದೆ ಆದ ಸ್ವಯಾರ್ಜಿತ ಆದಾಯ ಇರಲಿಲ್ಲ ನಾನು ಎಲ್ಲಾ ಹಣವನ್ನು ಒಟ್ಟು ಕುಟುಂಬದ ಆಸ್ತಿಗಳ ಆದಾಯದಿಂದ ನನ್ನ ಹೆಸರಿನಲ್ಲಿ ಖರೀದಿಸಿದ್ದು ಈಗ ನನ್ನ ಸ್ವಯಾರ್ಜಿತ ಆದಾಯದಿಂದ ಖರೀದಿಸಿದ ಆಸ್ತಿಗಳು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ಒಟ್ಟು ಕುಟುಂಬದ ಹಿರಿಯತನವನ್ನು ಮಾಡುತ್ತಿದ್ದು ನನ್ನ ಹೆಸರಿನಲ್ಲಿ ಬೆಳೆಗಳು ಕಾರ್ಖಾನೆಗೆ ಹೋಗುತ್ತಿದ್ದು ಅದರಿಂದ ಬಂದ ಹಣವನ್ನು ನಾನು ಉಪಯೋಗ ಮಾಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಿಮ್ಮ ಒಟ್ಟು ಕುಟುಂಬದಲ್ಲಿ ಇಲ್ಲಿಯವರೆಗೆ ಪಾಲುವಾಟ್ನಿ

ಆಗಿಲ್ಲ ಎಂದರೆ ಸಾಕ್ಷಿಯು ದಾವೆಯ ಎಲ್ಲಾ ಆಸ್ತಿಗಳು ನನ್ನ ಸ್ವಯಾರ್ಜಿತ ಆಸ್ತಿಗಳು ಆಗಿದ್ದರಿಂದ ಪಾಲುವಾಟ್ನಿ ಮಾಡಿಕೊಳ್ಳುವ ಪ್ರಮೇಯ ಇರುವುದಿಲ್ಲ ಎಂದು ಹೇಳುತ್ತಾರೆ. 30 ವರ್ಷಗಳ ಹಿಂದೆ ಬೇರೆ ಆಗಿದ್ದೆನೆ ಎಂದು ಬರೆಸಿದ್ದಿರಿ ಯಾರಿಗೆ ಯಾವ ಆಸ್ತಿ ಪಾಲು ಹೋಗಿದೆ ಎಂದರೆ ಸಾಕ್ಷಿಯು ನಾನು ಅದರ ಬಗ್ಗೆ ಕೇಳಿಲ್ಲ ಅವಶ್ಯಕತೆ ಬಂದಿಲ್ಲ ಎಂದು ಹೇಳುತ್ತಾರೆ.

**ವಾದಿ ಪರ ವಕೀಲರು ಕಾಲಾವಕಾಶ ಕೋರಿರುವುದರಿಂದ ಮುಂದುವರೆದ ಪಾಟೀ ಸವಾಲು ಮುಂದುಡಲಾಯಿತು.**

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**